# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1205 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ಜಿಲ್ಲೆಯ ಶಹಪುರ ಹಾಗೂ ವಡಗೇರಾ ತಾಲ್ಲೂಕಿನ ವ್ಯಾಪ್ತಿಗೆ ಬರುವ ಭೂಮಿಗಳಿಗೆ ಸಂಬಂಧಿಸಿದ ಹಳೆಯ ಭೂದಾಖಲೆಗಳು ತಾಲ್ಲೂಕು ಕಛೇರಿಯಲ್ಲಿ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಭೂದಾಖಲೆಗಳನ್ನು ಸಂರಕ್ಷಿಸಲು ಕೈಗೊಂಡ ಕ್ರಮಗಳೇನು; | ಶಹಾಪುರ ಮತ್ತು ವಡಗೇರಾ ತಾಲ್ಲೂಕಿನಲ್ಲಿ ಭೂದಾಖಲೆಗಳು ಲಭ್ಯವಿದ್ದು, ಈ ದಾಖಲೆಗಳನ್ನು ಸಂರಕ್ಷಣೆ ಮಾಡುವ ಕುರಿತು ಸರ್ಕಾರದ ಮಹತ್ವದ ಯೋಜನೆಯಾದ ಭೂಸುರಕ್ಷಾ ತಂತ್ರಾಂಶದ ಯೋಜನೆಯಡಿಯಲ್ಲಿ ದಾಖಲೆಗಳನ್ನು ಗಣಕೀಕರಣ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ವಡಗೇರಾ ತಾಲ್ಲೂಕಿನಲ್ಲಿ ಕಟ್ಟಡದ ಕೊರತೆಯಿಂದಾಗಿ ಕೆಲವು ದಾಖಲಾತಿಗಳು ಶಹಾಪೂರ ತಾಲ್ಲೂಕಿನಲ್ಲಿ ಲಭ್ಯವಿರುತ್ತವೆ ಹಾಗೂ ಸದರಿ ದಾಖಲಾತಿಗಳನ್ನು ಶೀಘ್ರದಲ್ಲೇ ವಡಗೇರಾ ತಾಲ್ಲೂಕಿಗೆ ಸ್ಥಳಾಂತರಿಸಲಾಗುತ್ತದೆ. |
| ಆ) | ಹಳೆ ದಾಖಲೆಗಳನ್ನು ಪಡೆಯಲು ಅರ್ಜಿ ಸಲ್ಲಿಸುವ ರೈತರಿಗೆ ತಾಲ್ಲೂಕು ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿಗಳು ದಾಖಲೆ ಗಳನ್ನು ಹುಡುಕಿ ಕೊಡುವುದರಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ನಿರ್ಲಕ್ಷ್ಯ ವಹಿಸುತ್ತಿರುವ ಸಿಬ್ಬಂದಿಗಳ ಮೇಲೆ ಕೈಗೊಳ್ಳಬಹುದಾದ ಕ್ರಮಗಳೇನು; | ಬಂದಿರುವುದಿಲ್ಲ.<br><br>ಯಾದಗಿರಿ ಜಿಲ್ಲೆಯ ಶಹಪುರ ಹಾಗೂ ವಡಗೇರಾ ತಾಲ್ಲೂಕಿನ ಎಲ್ಲಾ ಗ್ರಾಮಗಳ ಭೂದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಸಂರಕ್ಷಿಸಲಾಗುತ್ತಿದೆ ಹಾಗೂ ಸಾರ್ವಜನಿಕರು ನಕಲು ಕೋರಿ ಅರ್ಜಿ ಸಲ್ಲಿಸಿದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಕೂಡಲೇ ಸಕಾಲದಲ್ಲಿ ನಿಯಮಾನುಸಾರ ಅರ್ಜಿದಾರರು ಕೋರಿರುವ ದಾಖಲೆಗಳನ್ನು ಒದಗಿಸಲಾಗುತ್ತಿದೆ. ಆದ್ದರಿಂದ, ಈ ಸಂಬಂಧ ಯಾವುದೇ ದಾಖಲಾತಿಗಳನ್ನು ನೀಡಲು ಅಧಿಕಾರಿ/ಸಿಬ್ಬಂದಿಗಳು ನಿರ್ಲಕ್ಷ್ಯತನ ತೋರಿರುವುದಿಲ್ಲ / ತೋರಲು ಅವಕಾಶವಿರುವುದಿಲ್ಲ. |
| ಇ) | ಭೂಮಂಜೂರಾತಿ ಆದೇಶ ಪ್ರತಿಗಳು, 48ಎ ರಿಜಿಸ್ಟರ್, ಫಾರಂ ನಂ.7 ಮುಂತಾದ ದಾಖಲೆಗಳು ಸಿಗುತ್ತಿಲ್ಲವಾದ್ದರಿಂದ ಯಾವ ಕಾಲಮಿತಿಯಲ್ಲಿ ರೈತರಿಗೆ ಬೇಕಾಗಿರುವ ಈ ದಾಖಲೆಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು? (ವಿವರ ನೀಡುವುದು) | ಭೂಮಂಜೂರಾತಿ ಆದೇಶ ಪ್ರತಿಗಳು, 48ಎ ರಿಜಿಸ್ಟರ್, ಫಾರಂ ನಂ.7 ದಾಖಲಾತಿಗಳ ಕುರಿತು ಒದಗಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಕಛೇರಿಯಲ್ಲಿ ಲಭ್ಯವಿರುವ ದಾಖಲಾತಿಗಳನ್ನು ನಿಗಧಿತ ಸಮಯದಲ್ಲಿ ಅರ್ಜಿದಾರರಿಗೆ ನೀಡಲಾಗುತ್ತಿದೆ.<br><br>ಮುಂದುವರೆದು, ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರಡಿ ಫಾರಂ ನಂ.7 ಹೊಸದಾಗಿ ಸಲ್ಲಿಸಲು ಮತ್ತೆ ಕಾಲಾವಧಿ ವಿಸ್ತರಣೆ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.<br><br>ವಡಗೇರಾ ತಾಲ್ಲೂಕಿನಲ್ಲಿ ಭೂಮಂಜೂರಾತಿ ಆದೇಶ ಪ್ರತಿಗಳು, 48ಎ ರಿಜಿಸ್ಟರ್, ಫಾರಂ ನಂ.7 ದಾಖಲಾತಿಗಳು ಇರುವುದಿಲ್ಲ. ಆದ್ದರಿಂದ ಸದರಿ ದಾಖಲಾತಿಗಳು ಮೂಲ ತಾಲ್ಲೂಕು ಶಹಾಪೂರದಲ್ಲಿ ಇರುತ್ತವೆ. |

**ಸಂಖ್ಯೆ: ಕಂಇ 206 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು